ಅಧ್ಯಕ್ಷರು.—ಶ್ರೀ ಶಿವಮೂರ್ತಿಯವರು ತಾವು ಮಾತನಾಡಬಹುದು.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಶ್ರೀ ಮುರುಘರಾಜೇಂದ್ರರವರು ಜನತಾ ಪಕ್ಷದ ಕಾರ್ಯಕರ್ತರು. ಅವರ ಮೇಲೆ ೧೯೭೨ನೇ ಇಸವಿಯಲ್ಲಿ ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದ್ದಾರೆ. ಅವರು ವಿದ್ಯಾರ್ಥಿಗಳ ಸಂಘಟನೆಯನ್ನು ಮಾಡಿದ್ದಾರೆ. ಅವರು ಪ್ರಾರಂಭ ದಿಂದಲೂ ಕೂಡ ಒಳ್ಳೆಯ ಕೆಲಸಕಾರ್ಯಗಳನ್ನೂ ಮಾಡಿಕೊಂಡು ಬಂದಿದ್ದಾರೆ. ಆದರೆ ಅವರ ವಿರುದ್ಧ ಇವತ್ತು ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದ್ದಾರೆ. ಅವರು ರೈತರ ಮತ್ತು ಕಾರ್ಮಿಕರ ಸಂಘಟನೆ ಮಾಡಿದ್ದಾರೆ. ಆದರೆ ಈ ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದಂಥ ಕಾಲ ದಲ್ಲಿ ಈಗಿನ ಮಂತ್ರಿಗಳಾದಂಥ ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು ದೊಡ್ಡಬಳ್ಳಾ ಪುರದ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದ್ದಾರೆ. ಅವರ ಮೇಲೆ ಜಾರಿ ಮಾಡಿರುವ ಗಡಿಪಾರು ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ನಾನು ವಿಧಾನ ಸೌಧದ ಮುಂದೆ ಧರಣಿ ಸತ್ಯಾಗ್ರಹವನ್ನು ಮಾಡುತ್ತೇನೆ ಎಂದು. ಆಗ ಮಾನ್ಯ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಸಹ ಇದ್ದರು. ಆದರೆ ಅವರದೇ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಾದರೂ ಅವರನ್ನು ಏತಕ್ಕೆ ಬಿಡುಗಡೆ ಮಾಡಿ ಆ ಗಡಿ ಪಾರು ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳ ಬಾರದೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ ಶ್ರೀಮಾನ್ ಮುರುಘರಾಜೇಂದ್ರ ಎಂಬುವರ ಮೇಲೆ ಗಡಿಪಾರು ಆಜ್ಞೆ ಇನ್ನೂ ಜಾರಿಗೆ ಬಂದಿಲ್ಲ. ೧೯೭೨ನೇ ಇಸವಿ ಏಪ್ರಿಲ್‌ನಲ್ಲಿ ಕೋಮುವಾರು ಗಲಭೆ ಉಂಟಾಗಿ ಆ ಸಂದರ್ಭದಲ್ಲಿ ಶ್ರೀಮಾನ್ ಸದಾನಂದ, ಶ್ರೀ ಶೇಕ್ ಮಹಮದ್ ಹಾಗೂ ಇಸ್ಮಾಯಿಲ್ ಎಂಬುವವರ ಮೇಲೆ ಗಡಿಪಾರು ಆಜ್ಞೆಯನ್ನು ಹೊರಡಿಸಬೇಕೆಂದು ಒಂದು ಪ್ರಕರಣ ಶುರು ವಾಯಿತು. ಆದರೆ ಈ ಬಗ್ಗೆ ದಿನಾಂಕ ೩೦-೧೦-೧೯೮೪ರಂದು ಕೋರ್ಟಿನಲ್ಲಿ ಆರ್ಗ್ಯೂಮೆಂಟ್ ನಡೆಯ ಬೇಕಾಗಿರುವುದರಿಂದ ಆ ಗಡಿ ಪಾರು ಆಜ್ಞೆಯನ್ನು ಇನ್ನೂ ಜಾರಿ ಮಾಡಿಲ್ಲ.

ಶ್ರೀ ಪಂಪಾಪತಿ.—ಸ್ವಾಮಿ ಆ ಕೇಸ್‌ನ್ನು ವಾಪಸ್ಸು ತೆಗೆದುಕೊಳ್ಳಬಹುದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ಆರ್ಗ್ಯೂಮೆಂಟ್ ನಡೆಯುತ್ತಿರುವಂಥ ಸಂದರ್ಭದಲ್ಲಿ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆ ಪ್ರಶ್ನೆಯೇ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಶ್ರೀ ಗೋಪಾಲ ಮುಕುಂದ ಕಾನಡೆಯವರು ತಾವು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಬಹುದು.

(iii) ಸಾಬೂನು ಕಾರ್ಖಾನೆಯಲ್ಲಿ ಹರಿಜನ/ಗಿರಿಜನ ಕೆಲಸಗಾರರನ್ನು ತೆಗೆದ ಬಗ್ಗೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ ಬೆಂಗಳೂರು ಸೋಪ್ ಫ್ಯಾಕ್ಟರಿಯಲ್ಲಿ ೫೫ ಜನ ಹರಿಜನ ಮತ್ತು ಗಿರಿಜನರಿಗೆ ಬಹಳ ಅನ್ಯಾಯವಾಗಿದೆ ಅದು ಏನೆಂದರೆ ಅಲ್ಲಿ ಕೆಲಸ ಮಾಡುವಂಥ ೫೫ ಜನ ಹರಿಜನ ಮತ್ತು ಗಿರಿಜನರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದಾರೆ. ಆದರೂ ಸರ್ಕಾರದ ಗಮನಕ್ಕೆ ಇದುವರೆಗೂ ಬಂದಿಲ್ಲ. ಅದೂ ಹರಿಜನ ಮತ್ತು ಗಿರಿಜನರ ಕಲ್ಯಾಣ ಸಮಿತಿಯು ಈ ಮೈಲ್ಯಂಡ ಸೋಪ್ ಫ್ಯಾಕ್ಟರಿಗೆ ವಿಜಿಟ್ ಕೊಟ್ಟು ಬಂದ ಮಾರನೇ ದಿವಸವೇ ಆ ಹರಿಜನ ಮತ್ತು ಗಿರಿಜನ ಕೆಲಸಗಾರರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದಾರೆ, ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಈಗತಾನೆ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೀರಿ. ಅವರು ಸಂಬಂಧಪಟ್ಟ ಇಲಾಖೆಯ ಪತಿಯಿಂದ ಉತ್ತರ ತರಿಸಿ ಒಂದು ಹೇಳಿಕೆಯನ್ನು ಮಾಡುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ ಯಾವಾಗ ಹೇಳಿಕೆ ಮಾಡುತ್ತಾರೆಂದು ನಮಗೆ ಒಂದು ಟೈಮ್ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನಿಯಮ ೩೫ರಲ್ಲಿ ನಾವು ಮಾನ್ಯ ಮಂತ್ರಿಗಳನ್ನು ನಿರ್ಬಂಧ ಮಾಡಿ ಉತ್ತರ ತರಿಸಿಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ಮಾನ್ಯ ಸದಸ್ಯರು ಬಹಳ ಗಂಭೀರವಾದಂಥ ವಿಷಯವನ್ನು ಎತ್ತಿದ್ದಾರೆ. ಆಲ್ಲಿ ಸುಮಾರು ೫ ಜನ ಹರಿಜನ ಮತ್ತು ಗಿರಿಜನರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದಾರೆ. ಅವರು ಫ್ಯಾಕ್ಟರಿಯ ಹೊರಗಡೆ ಬಂದು ಚಳುವಳಿಯನ್ನು ಮಾಡುವಂಥ ಸಂದರ್ಭ ಇದೆ. ಆದ್ದರಿಂದ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗ ಉತ್ತರ ತರಿಸಿಕೊಟ್ಟರೆ ಅಲ್ಲಿಯ ಪರಿಸ್ಥಿತಿ ಶಾಂತಿಯುತವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಆ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಮಾನ್ಯ ಮಂತ್ರಿಗಳು ತರಿಸಿಕೊಡುತ್ತಾರೆ. ೫೫ರಲ್ಲಿ ನಾನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ, ಅನೇಕ ಸಾರಿ ನಾನು ಮಾನ್ಯ ಸದಸ್ಯರಿಗೆ ಸಹಾಯವಾಗಲೆಂದು ನಿಮ್ಮ ಪರವಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡಿ ಉತ್ತರ ತರಿಸಿ ಕೊಟ್ಟಿದ್ದೇನೆ.

(iv) ಸ್ಥಳೀಯ ಅಭ್ಯರ್ಥಿಗಳ ಖಾಯಂ ಗೊಳಿಸುವಿಕೆ

ಶ್ರೀ ಸ್ವಾಮಿ ರಾವ್ ಬಿ.—ಮಾನ್ಯ ಅಧಕ್ಷರೇ, ಈಗಾಗಲೇ ವಿಧಾನ ಸೌಧದ ಎದುರುಗಡೆ ನೂರಾರು ಜನ ಸ್ಥಳೀಯ ಅಭ್ಯರ್ಥಿಗಳು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆದರೆ ಇದರ ಬಗ್ಗೆ ಸರ್ಕಾರ ಯಾವ ಒಂದು ನಿಲುವನ್ನು ಸಹ ತೆಗೆದು ಕೊಂಡಿಲ್ಲ. ಸುಮಾರು ೫–೬ ತಿಂಗಳ ಹಿಂದೆ ಸ್ಥಳೀಯ ಅಭ್ಯರ್ಥಿಗಳ ಜಾಗದಲ್ಲಿ ಪಿ.ಎಸ್.ಸಿ.ಯಿಂದ ಅಭ್ಯರ್ಥಿಗಳು ಸೆಲೆಕ್ಟ್ ಆಗಿ ಬಂದು ಇವರ ಜಾಗದಲ್ಲಿ ಸೇರಿಕೊಂಡಿರುವುದರಿಂದ ಇವರನ್ನು ಮನೆಗೆ ಕಳುಹಿಸಿಕೊಡುವಂಥ ಪರಿಸ್ಥಿತಿ ಬಂದಿದೆ. ಈ ಸ್ಥಳೀಯ ಅಭ್ಯರ್ಥಿಗಳು ಸುಮಾರು ೬ ಸಾವಿರ ಜನ ಇದ್ದಾರೆ. ಇವರು ಈ ವಾದದ ಬಗ್ಗೆ ಹೈಕೋರ್ಟಿಗೆ ಸಹ ಹೋಗಿದ್ದರು. ಅಲ್ಲಿ ಕೂಡ ಇವರ ಪರವಾಗಿ ತೀರ್ಪು ಬಂದಿದೆ. ಸ್ಟೈಫೆಂಡರಿ ಪದವೀಧರರಿಗೆ ಯಾವ ರೀತಿಯಲ್ಲಿ ತಾವು ಉದ್ಯೋಗವನ್ನು ಒದಗಿಸಿಕೊಡುತ್ತೀರೋ ಆದೇ ರೀತಿಯಲ್ಲಿ ಇವರಿಗೂ ಉದ್ಯೋಗವನ್ನು ಒದಗಿಸಿಕೊಟ್ಟರೆ ಒಳ್ಳೆಯದು, ಸುಮಾರು ೨೯೦ ದಿನಗಳ ಕಾಲ ಯಾರು ಕೆಲಸ ಮಾಡಿರುತ್ತಾರೋ ಅಂತಹವರನ್ನು ಖಾಯಂ ನೌಕರನೆಂದು ಸೇರಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಯಾವ ತೊಂದರೆ ಇಲ್ಲ. ಆದ್ದರಿಂದ ಆ ಎಲ್ಲಾ ಸ್ಥಳೀಯ ಅಭ್ಯರ್ಥಿಗಳನ್ನು ಸಹ ತಾವು ಖಾಯಂ ಮಾಡಿ ಅವರ ಬಾಳನ್ನು ಹಸನು ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಸ್ಥಳೀಯ ಅಭ್ಯರ್ಥಿಗಳ ಮತ್ತು ಸ್ಟೈಫೆಂಡರಿ ಪದವೀಧರರ ಪ್ರಶ್ನೆಗಿಂತ ವಿಭಿನ್ನವಾಗಿದೆ. ಸ್ಥಳೀಯ ಅಭ್ಯರ್ಥಿಗಳನ್ನು ನಾವು ಸರ್ಕಾರಿ ನೌಕರಿಗೆ ತೆಗೆದುಕೊಳ್ಳುವಾಗ ರೂಲ್ಸ್‌ನ್ನು ನೋಡಿ ತೆಗೆದುಕೊಂಡಿಲ್ಲ, ಈ ಒಂದು ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಕೇಂದ್ರ ಸರ್ಕಾರ ಮಾಡದೆ ಇರುವುದರಿಂದ ಸ್ಥಳೀಯ ಅಭ್ಯರ್ಥಿಗಳ ಪ್ರಶ್ನೆ ಉಂಟಾಗಿದೆ. ಈಗ ಸ್ಟೈಫೆಂಡರಿ ಪದವೀಧರರಿಗೆ ಸುಮಾರು ೨೦೦ ರೂಪಾಯಿಗಳು ಮಾತ್ರ ಸಿಗುತ್ತಿದೆ. ಆದರೆ ಈ ಸ್ಥಳೀಯ ಅಭ್ಯರ್ಥಿಗಳಿಗೆ ಕಾಯ್ದೆ ಪ್ರಕಾರ ಅವರ ಸಂಬಳ ಸಿಗುತ್ತಿದೆ. ಆದರೆ ಅವರ ಬೇಸಿಕ್ ಸಂಬಳದಲ್ಲಿ ೧೦ ರೂಪಾಯಿಗಳನ್ನು ಕಡಿದುಕೊಂಡು ಉಳಿದ ಪೂರ್ತಿ ಸಂಬಳ ಅವರಿಗೆ ಸಿಗುತ್ತಿದೆ. ಆದರೆ ಆ ಎಲ್ಲಾ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಮಾಡುವುದಕ್ಕೆ ಕಾಯ್ದೆಯ ತೊಡಕು ಇದೆ. ಈ ಸಂಬಂಧದಲ್ಲಿ ಹೈಕೋರ್ಟಿನಲ್ಲಿ ೩–೪ ಸಾರಿ ಹೋಗಿ ಆ ನಂತರ ಸುಮಾರು ೫–೬ ತಿಂಗಳ ಹಿಂದೆ ಮಾತ್ರ ಇತ್ಯರ್ಥವಾಗಿದೆ. ಅವರು ಕೂಡ ಅವರ ತೀರ್ಮಾನ ಬಹಳ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಅದು ಏನೆಂದರೆ ನಾವು ನೇಮಕ ಮಾಡಿಕೊಂಡಂತಹ ಖಾಯ್ದೆ ಕಾನೂನಿಗೆ ವಿರುದ್ಧವೆಂದು ಅವರು ತಮ್ಮ ಅಭಿಪ್ರಾಯವನ್ನು ಸಹ ತಿಳಿಸಿದ್ದಾರೆ. ಈ ಸ್ಥಳೀಯ ಅಭ್ಯರ್ಥಿಗಳು ಸಹಸ್ರಾರು ಸಂಖ್ಯೆಯಲ್ಲಿ ಇದ್ದಾರೆ. ಆದರೆ ಹೈಕೋರ್ಟ್ ಆಜ್ಞೆ ಪ್ರಕಾರ ಅವರಿಗೆ ಸರ್ಕಾರಿ ಉದ್ಯೋಗದಲ್ಲಿ ೫೦ ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿದ್ದಾರೆ. ಆದರೆ ಈಗಾಗಲೇ ಸಂಬಂಧಪಟ್ಟ ರಿಕ್ರೂಟ್‌ಮೆಂಟ್ ಕಮಿಟಿಗಳು ಕೆಲಸವನ್ನು ಪ್ರಾರಂಭ ಮಾಡಿ ಕೆಲವೊಂದು ಕಡೆ ಇಂಟರ್‌ವ್ಯೂ ಸಹ ನಡೆಯುತ್ತಿದೆ. ಈಗ ಸುಮಾರು ೨೩ ಸಾವಿರ ಉದ್ಯೋಗಗಳಿಗೆ ಅರ್ಜಿಯನ್ನು ಕರೆದಿದ್ದೇವೆ. ಅದರಲ್ಲಿ ಇವರಿಗೂ ಕೆಲವರಿಗೆ ಸಿಗಬಹುದು. ಆ ಲಾಭವನ್ನು ಈ ಸ್ಥಳೀಯ ಅಭ್ಯರ್ಥಿಗಳು ಪಡೆದುಕೊಳ್ಳಬಹುದು ಆದರೆ ನಾನು ಒಂದು ಮಾತನ್ನು ಇಲ್ಲಿ ಹೇಳಬೇಕೆಂದರೆ ಈ ಒಂದು ಪದ್ಧತಿ ನಮ್ಮ ದೇಶದಲ್ಲಿ ಮಾತ.